## ಪತ್ರಿಕಾ ಪ್ರಕಟಣೆ

ವಿಜಯಪುರ

ದಿನಾಂಕ: 13.06.2021.

### 1] ಚಡಚಣ ಪೊಲೀಸ ಠಾಣೆ ಗುನ್ನೆ ನಂ: 53/2021 ಕಲಂ: 279, 337, 338, 304[ಎ] ಐಪಿಸಿ

ದಿನಾಂಕ 12.06.2021 ರಂದು 13.45 ಗಂಟೆಗೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ಮೃತ: ರಾಜೇಂದ್ರ ಬಸಪ್ಪ ಕಾಂಬಳೆ ವಯಾ॥ 45 ವರ್ಷ ಸಾ॥ ಗೋಡಿಹಾಳ ತಾ॥ ಚಡಚಣ [ಹಿರೊ ಎಚ್.ಎಫ್.ಡಿಲಕ್ಸ್ ಕಂಪನೀಯ ಮೋಟರ್ ಸೈಕಲ್ ಚಾಲಕ] 2] ಮೃತ: ಅರಬಾಜ ಅಜರುದ್ದೀನ ಶೇಖ ವಯಾ॥ 45 ವರ್ಷ ಸಾ॥ ಗುಂದವಾನ ತಾ॥ ಇಂಡಿ [ಯಮಹಾ ಕಂಪನೀಯ ಮೋಟರ್ ಸೈಕಲ್ ನಂ: ಸಿ.ಆರ್.ಜೆ–1058 ನೇದ್ದರ ಚಾಲಕ] ಇವರು ಚಡಚಣ ಕಡೆಯಿಂದಾ ಝಳಕಿ ಕಡೆಗೆ ಅತಿ ಜೋರಾಗಿ ವ, ನಿರ್ಲಕ್ಷತನದಿಂದಾ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಹೋಗಿದ್ದು, ಅದೆ ರೀತಿ ಇನ್ನೊಬ್ಬ ಮೋಟರ್ ಸೈಕಲ್ ಸವಾರನಾದ ಮೃತ: ಅರಬಾಜ ಅಜರುದ್ದೀನ ಶೇಖ ಸಾ॥ ಗುಂದವಾನ ತಾ॥ ಇಂಡಿ ಇವನು ಸಹ ತಾನು ನಡೆಸುತ್ತಿರುವ ಯಮಹಾ ಕಂಪನೀಯ ಮೋಟರ್ ಸೈಕಲ್ ನಂ: ಸಿ.ಆರ್.ಜೆ–1058 ನೇದ್ದನ್ನು ಝಳಕಿ ಕಡೆಯಿಂದಾ ಚಡಚಣ ಕಡೆಗೆ ಅದೇ ವೇಗದಲ್ಲಿ ನಡೆಸಿಕೊಂಡು ಬಂದು ಉಭಯ ಸೈಕಲ್ ಸವಾರರು ಎದುರು–ಬದುರಾಗಿ ಗಾಡಿಗಳನ್ನು ನಡೆಸಿಕೊಂಡು ಬಂದು ಒಬ್ಬರಿಗೊಬ್ಬರು ಹಾಯಿಸಿ ಡಿಕ್ಕಿ ಹೊಡೆಸಿದ್ದರ ಪರಿಣಾಮವಾಗಿ ರಾಜೇಂದ್ರ ಕಾಂಬಳೆ ಇವನಿಗೆ ಹಣೆಯ ಮೇಲೆ, ಕಣ್ಣುಗಳ ಹತ್ತಿರ ಉದ್ದನೇಯ ಭಾರಿ ಹರಿದ ಗಾಯವಾಗಿ ರಕ್ತಸ್ರಾವವಾಗಿದ್ದು, ಅಲ್ಲದೆ ಬಲಬಾಜು ಭುಜಕ್ಕೆ, ಎದೆಯ ಮೇಲೆ ಗಾಯಪೆಟ್ಟುಗಳು ಹಾಗು ಬಲಗಾಲಿನ ಮೊಳಕಾಲದ ಹತ್ತಿರ ಎಲುವು ಮುರಿದು ಜಾಗಾದಲ್ಲಿ ಮೃತಾಗಿದ್ದು ಅಲ್ಲದೆ ಅರಬಾಜ ಅಜರುದ್ದೀನ ಶೇಖ ಸಾ॥ ಗುಂದವಾನ ತಾ॥ ಇಂಡಿ ಇವನಿಗೂ ಸಹ ಬಲಬಾಜು ಹಣೆಯ ಮೇಲೆ ಉದ್ದನೇಯ ಹರಿದ ಗಾಯವಾಗಿ ರಕ್ತಸ್ರಾವವಾಗಿದ್ದು ಅಲ್ಲದೆ ಮುಖಕ್ಕೆ, ಎದೆಗೆ, ಬಲಗೈ ಮೊಳಕೈ ಹತ್ತಿರ ಗಾಯಪೆಟ್ಟುಗಳು ಆಗಿ ಜಾಗಾದಲ್ಲಿ ಮೃತಾಗಿರುತ್ತಾನೆ ಮತ್ತು ಮೃತ: ರಾಜೇಂದ್ರನ ಮೋಟರ್ ಸೈಕಲ್‌ದ ಹಿಂಬದಿ ಸವಾರನಾದ: ಸಿದರಾಯ ಶಂಕ್ರೆಪ್ಪಾ ಕಾಂಬಳೆ ಇವನಿಗೂ ಸಹ ಮುಖಕ್ಕೆ, ತಲೆಗೆ, ಎದೆಗೆ ಸಾದಾ ವ, ಭಾರಿ ಗಾಯಪೆಟ್ಟುಗಳು ಆಗಿರುವ ಬಗ್ಗೆ ಫಿರ್ಯಾದದಲ್ಲಿ ನಮೂದು ಇರುತ್ತದೆ. ಈ ಬಗ್ಗೆ ಪೀರಪ್ಪ ರಾಮಪ್ಪ ಬನಸೋಡೆ ಸಾ॥ ಚಡಚಣ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 12.06.2021 ರಂದು ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

### 2] ಮಹಿಳಾ ಪೊಲೀಸ ಠಾಣೆ ಗುನ್ನಾ. ನಂ: 62/2021 ಕಲಂ: ಮಹಿಳೆ ಕಾಣೆ

ದಿನಾಂಕ 23.04.2021 ರಂದು ನಸುಕಿನ 05.30 ಗಂಟೆಯಿಂದ 16.00 ಗಂಟೆಯ ನಡುವಿನ ಅವಧಿಯಲ್ಲಿ ಇದರಲ್ಲಿ ಕಾಣೆಯಾದ ರೇಣುಕಾ ಗಂ॥ ಅಂಬು ಬೋರಗಿ, ವಯಾ: 32 ವರ್ಷ, ಸಾ॥ ಖಾಜಾಅಮೀನ ದರ್ಗಾ ಹತ್ತಿರ ವಿಜಯಪುರ ಇವಳು ಮನೆಯಲ್ಲಿ ಯಾರಿಗೂ ಹೇಳದೆ ಕೇಳದೆ ಮನೆ ಬಿಟ್ಟು ಹೋಗಿ ವಾಪಸ್ಸ ಮನೆಗೆ ಬಾರದೆ ಎಲ್ಲಿಗೋ ಹೋಗಿ ಕಾಣೆಯಾಗಿರುತ್ತಾರೆ. ಕಾಣೆಯಾಗಿರುವ ರೇಣುಕಾ ಇವರದು ಕೋಲು ಮುಖ, ಗೋದಿಗೆಂಪು ಮೈಬಣ್ಣ, ಮೈಯಿಂದ ಸಾದಾರಣ ಮೈಕಟ್ಟು, ಎತ್ತರ : 5 ಪೂಟ್ 1 ಇಂಚು ಇದ್ದು, ಈ ಬಗ್ಗೆ ಅಂಬು ಸಿದ್ರಾಮ ಭೋರಗಿ, ಸಾ॥ ಖಾಜಾಅಮೀನ ದರ್ಗಾ ಹತ್ತಿರ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 12.06,2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

### 3] ಮುದ್ದೇಬಿಹಾಳ ಪೊಲೀಸ ಠಾಣೆ ಗುನ್ನಾ. ನಂ: 101/2021 ಕಲಂ: 188, 269, ಐಪಿಸಿ & 78(3) ಕೆ.ಪಿ ಆ್ಯಕ್ಟ

ದಿನಾಂಕ 12.06.2021 ರಂದು 12.15 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ 1] ಬಾಲಪ್ಪ ಕಾಳಪ್ಪ ಅಂಬಿಗೇರ ಸಾ: ಅಮರಗೋಳ, ತಾ: ಮುದ್ದೇಬಿಹಾಳ ಇತನು ಪ್ರಸ್ತುತ ರಾಜ್ಯ ಸರ್ಕಾರ ಕೋರೋನಾ ವೈರಸ್/ಕೊವಿಡ್–19 ಸಾಂಕ್ರಾಮಿಕ ರೋಗ ಒಬ್ಬರಿಂದ ಒಬ್ಬರಿಗೆ ಸಾರ್ವಜನಿಕರಿಗೆ ಹರಡದಂತೆ ತಡೆಯುವ ಉದ್ದೇಶದಿಂದಾ ಲಾಕ್–ಡೌನ್ ಜಾರಿ ಮಾಡಿದ್ದು ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪೂರ ರವರು ಕೂಡಾ ಕೋರೋನಾ ವೈರಸ್/ಕೊವಿಡ್–19 ಸಾಂಕ್ರಾಮಿಕ ರೋಗ ಒಬ್ಬರಿಂದ ಒಬ್ಬರಿಗೆ ಸಾರ್ವಜನಿಕರಿಗೆ ಹರಡದಂತೆ ತಡೆಯುವ ಉದ್ದೇಶದಿಂದಾ ಮುಂಜಾಗೃತಾ ಕ್ರಮವಾಗಿ ಹೊರಡಿಸಿದ ಆದೇಶವನ್ನು ಉಲ್ಲಂಘನೆ ಮಾಡಿ, ಕೋರೋನಾ ಸಾಂಕ್ರಾಮಿಕ ರೋಗ ಒಬ್ಬರಿಂದಾ ಒಬ್ಬರಿಗೆ ಹರಡುತ್ತದೆ ಅಂತಾ ಗೊತ್ತಿದ್ದರೂ ಕೂಡಾ ಸಾರ್ವಜನಿಕರಿಗೆ ಸೇರಿಸಿಕೊಂಡು ತನ್ನ ಪಾಯದೇಗೋಸ್ಕರ ಒಂದು ರೂಪಾಯಿಗೆ 80 ರೂಪಾಯಿ ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಸಾರ್ವಜನಿಕರಿಂದ ಹಣ ಪಡೆದುಕೊಂಡು ಓಸಿ ನಂಬರ ಬರೆದುಕೊಟ್ಟು ಕಲ್ಯಾಣ ಮಟಕಾ ಅಂಬುವ ಓ.ಸಿ ಜೂಜಾಟವನ್ನು ನಡೆಸುತ್ತಿದ್ದಾಗ ಸಿಕ್ಕಿದ್ದು ಇರುತ್ತದೆ. ಜಪ್ತಾದ ಮಾಲು: 1] ಒಂದು ಓ.ಸಿ ನಂಬರ ಬರೆದ ಚೀಟಿ, 2] ಒಂದು ಬಾಲ ಪೆನ್ನು 3] 1200=00 ರೂ ರೋಖ ಹಣ ಈ ಬಗ್ಗೆ ಸ:ತ: ಎಮ್. ಬಿ ಬಿರಾದಾರ ಪಿ.ಎಸ್.ಐ (ಕಾಸು) ಮುದ್ದೇಬಿಹಾಳ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 12.06,2021 ರಂದು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

### 4] ಬ ಬಾಗೇವಾಡಿ ಪೊಲೀಸ ಠಾಣೆ ಗುನ್ನಾ. ನಂ: 97/2021 ಕಲಂ: ಮಹಿಳೆ ಕಾಣೆ.

ದಿನಾಂಕ 03.06.2021 ರಂದು 15:00 ಗಂಟೆ ಸುಮಾರಿಗೆ ಇದರಲ್ಲಿ ಕಾಣೆಯಾದ ಸುರೇಖಾ ಗಂಡ ಚಿನ್ನು ಲಮಾಣಿ ವಯಾ–20 ವರ್ಷ.ಸಾ: ಕರಭಂಟನಾಳ ತಾಂಡಾ ಇವಳು ಮನೆಯಿಂದ ಸಂಡಾಸಕ್ಕೆ ಹೋಗುವುದಾಗಿ ಹೇಳಿ ಹೋದವಳು ಪರ್ತ ಮನೆಗೆ ಬಾರದೇ ಎಲ್ಲಿಯೋ ಕಾಣೆಯಾಗಿದ್ದು ಇರುತ್ತದೆ, ಕಾಣೆಯಾದ ನನ್ನ ಮಗಳು ನೋಡಲು ನೋಡಲು ಎತ್ತರ 5 ಪೂಟ, ಗುಂಡು ಮುಖ, ಬಿಳಿಯ ಬಣ್ಣ, ಮೈಮೇಲೆ ಕಪ್ಪು ಹೂವಿನ ಪತ್ತಲು, ಕರಿ ಜಂಪರ ಧರಿಸಿರುತ್ತಾಳೆ. ಲಂಬಾಣಿ ಬಾಷೆ, ಕನ್ನಡ ಬಾಷೆ, ಹಿಂದಿ ಬಾಷೆ, ಮಾತನಾಡುತ್ತಾಳೆ. ಈ ಬಗ್ಗೆ ಸುರೇಶ ಹಣಮಂತ ರಾಠೋಡ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 12.06,2021 ರಂದು ಬ ಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.